ಕೊಳಚೆ ನಿರ್ಮೂಲನಾ ಮಂಡಳಿ ಅಭಿವೃದ್ಧಿ ಕಾರ್ಯಕ್ರಮಗಳು.

126(433)ಶ್ರೀ ಬಸವನಗೌಡ ರಾಮನಗೌಡ ಪಾಟೀಲ್ (ಯಾತ್ನಾಳ್) (ವಿಜಾಪುರ) :— ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಗೆ ಎಷ್ಟು ಹಣ ಕಾದಿರಿಸಲಾಗಿದೆ; ರಾಜ್ಯದಲ್ಲಿ ಮಂಡಳಿ ಯಾವ ಯಾವ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ;

ಆ) ವಿಜಾಪುರ ಜಿಲ್ಲೆಯ ನಗರಸಭೆ ಪುರಸಭೆ ಹಾಗೂ ಪಟ್ಟಣ ಪಂಚಾಯತ್‌ಗಳಿಗೆ ಕೊಳಚೆ ಪ್ರದೇಶಗಳ ಅಭಿವೃದ್ಧಿಗಾಗಿ ಎಷ್ಟು ಹಣ ನೀಡಲಾಗಿದೆ;

ಇ) ವಿಜಾಪುರದಲ್ಲಿ ಎಷ್ಟು ಪ್ರದೇಶಗಳನ್ನು ಕೊಳಚೆ ಪ್ರದೇಶವೆಂದು ಘೋಷಿಸಲಾಗಿದೆ; ಅವು ಯಾವುವು?

ಈ) ಹಾಲಿ ಕೈಗೊಳ್ಳುತ್ತಿರುವ ಕಾಮಗಾರಿಗಳಾವುವು ;

ಉ) ಸದರಿ ಮಂಡಳಿಯನ್ನು ವಿಸರ್ಜಿಸಿ ಸ್ಥಳೀಯ ಸಂಸ್ಥೆಗಳಿಗೆ ಅದರ ಹಣ ಬಿಡುಗಡೆಗೊಳಿಸಿ ಸ್ಥಳೀಯ ಸಂಸ್ಥೆಗಳ ತಾಂತ್ರಿಕ ವಿಭಾಗದಿಂದ ಅಭಿವೃದ್ಧಿಪಡಿಸುವುದು ಹೆಚ್ಚು ಸೂಕ್ತವಲ್ಲವೆ ಇಲ್ಲದಿದ್ದರೆ ಕಾರಣವೇನು?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು) :—

ಅ) 1998-99ರ ಸಾಲಿಗೆ ಸರ್ಕಾರದ ಆಯವ್ಯಯದಲ್ಲಿ ಒಟ್ಟು 1837.50 ಲಕ್ಷ ರೂ.ಗಳನ್ನು ಮಂಡಳಿಗೆ ಕಾದಿರಿಸಲಾಗಿದೆ.

1. ಯೋಜನಾ ಬಾಬ್ತು 1700000 ಲಕ್ಷ
2. ಯೋಜನೇತರ ಬಾಬ್ತು 137.50 ಲಕ್ಷ

ಈ ಅನುದಾನದಿಂದ ಮಂಡಳಿಯು ಈ ಕೆಳಗಿನಂತೆ ಯೋಜನೆಗಳನ್ನು ಹಮ್ಮಿಕೊಂಡು ಅನುಷ್ಠಾನಗೊಳಿಸಲಾಗುತ್ತಿದೆ.

	ಯೋಜನೆ	ಒದಗಿಸಿರುವ ಹಣ
1.	ಮೂಲಭೂತ ಸೌಲಭ್ಯ ಯೋಜನೆ	615.00 ಲಕ್ಷ
2.	ವಸತಿ ಯೋಜನೆ	550.00 ಲಕ್ಷ
3.	ನಿವೇಶನ ಮತ್ತು ಸೇವೆ	22.00 ಲಕ್ಷ

4.	ತರಬೇತಿ ಮತ್ತು ಗಣಕೀಕರಣ	3.00 ಲಕ್ಷ
5.	ಹುಡ್ಕೋ ಸಾಲದ ಮರುಪಾವತಿ	450.00 ಲಕ್ಷ
6.	ಆಡಳಿತ ಮತ್ತು ಸಿಬ್ಬಂದಿ ವೆಚ್ಚ	
	ಅ. ಯೋಜನೆ	00.00 ಲಕ್ಷ
	ಆ. ಯೋಜನೇತರ	137.50 ಲಕ್ಷ

ಅ) ವಿಜಾಪುರ ಜಿಲ್ಲೆಯ ಮಂಡಳಿಯ ಕಾರ್ಯವ್ಯಾಪ್ತಿಗೆ ಒಳಪಡುವ ಘೋಷಿತ ಪ್ರದೇಶಗಳ ಅಭಿವೃದ್ಧಿಗಾಗಿ 1998-99ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ 16.00 ಲಕ್ಷ ರೂ.ಗಳನ್ನು ನಿಗಧಿಪಡಿಸಲಾಗಿದೆ.

ಇ) ವಿಜಾಪುರ ನಗರದಲ್ಲಿ ಕಾಯಿದೆಯಡಿ ಒಟ್ಟು 22 ಕೊಳಚೆ ಪ್ರದೇಶಗಳು ಘೋಷಿತವಾಗಿದ್ದು, ಅವುಗಳೆಂದರೆ:-

1. ಖಿದಾನಪೂರಗಲ್ಲಿ
2. ಜೋರಾಪುರ ಗೇಟ್
3. ವೆಂಕಟರಮಣಗಲ್ಲಿ
4. ಕವಲಿಗಲ್ಲಿ
5. ರಂಗೀಮಸೀದಿ
6. ದನದ ದಾವಖಾನೆ ಹಿಂಭಾಗ
7. ಪತ್ತೆಭಾವುಡಿ
8. ರಚ್ಚಿನ ಮಹಲ್
9. ಫೈಲ್ವಾನ್‌ಗಲ್ಲಿ 1ನೇ ಹಂತ
10. ಗೊಲ್ಲರ ಓಣಿ, ಇಂಡಿ ರಸ್ತೆ
11. ಅಳವಿ ಮಸೀದಿ
12. ರಜಪೂತಗಲ್ಲಿ
13. ಜೋಡುಗುಂಬಜ್ ಪಶ್ಚಿಮ
14. ಬಡೇಕಮಾನ ಹತ್ತಿರ
15. ಪಾಶ್ಚಾಪುರ ರಸ್ತೆ
16. ಜಾಡರಗಲ್ಲಿ
17. ತಾಜಬಾವುಡಿ

18. ಕುಂಚಿಕೊರವರ ಓಣಿ
19. ಮಿನಿಮಾದರ ವಡ್ಡರ ಓಣಿ
20. ಪೈಲ್ವಾನ್‌ಗಲ್ಲಿ 2ನೇ ಹಂತ
21. ನೂತನ ಗಿರಣಿ ಹತ್ತಿರ
22. ಇಂದಿರಾನಗರ, ಮನಗೊಳಿ

ಈ ವಿಜಾಪುರ ನಗರ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಕೊಳಚೆ ಪ್ರದೇಶಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.

ಅ. ಖಿದಾನಪುರಗಲ್ಲಿ ಕೊಳಚೆ ಪ್ರದೇಶದಲ್ಲಿ 1.50 ಲಕ್ಷ ರೂ.ಗಳ ಅಂದಾಜು ವೆಚ್ಚದಲ್ಲಿ ಕುಡಿಯುವ ನೀರು, ನೆಲಹಾಸು, ಬೀದಿ ದೀಪ ಒದಗಿಸುವುದು.

ಆ. ಗೊಲ್ಲರ ಓಣಿ ಕೊಳಚೆ ಪ್ರದೇಶದಲ್ಲಿ 1.50 ಲಕ್ಷ ರೂ.ಗಳ ಅಂದಾಜಿನಲ್ಲಿ ನೆಲಹಾಸು, ಕುಡಿಯುವ ನೀರು ಬೀದಿ ದೀಪ ಒದಗಿಸುವುದು.

ಇ. ಜಾಡರಗಲ್ಲಿ ಕೊಳಚೆ ಪ್ರದೇಶದಲ್ಲಿ 1.50 ಲಕ್ಷ ರೂ.ಗಳ ಅಂದಾಜಿನಲ್ಲಿ ನೆಲಹಾಸು, ಒಳಚರಂಡಿ ಮತ್ತು ಬೀದಿ ದೀಪ ಒದಗಿಸುವುದು.

ಈ. ಅಳವಿ ಮಸೀದಿ ಕೊಳಚೆ ಪ್ರದೇಶದಲ್ಲಿ 1.00 ಲಕ್ಷ ರೂ.ಗಳ ಅಂದಾಜಿನಲ್ಲಿ ನೆಲಹಾಸು ಒದಗಿಸುವುದು.

ಉ. ತಾಜಬಾವುಡಿ ಕೊಳಚೆ ಪ್ರದೇಶದಲ್ಲಿ 1.00 ಲಕ್ಷ ರೂ.ಗಳ ಅಂದಾಜಿನಲ್ಲಿ ಒಳಚರಂಡಿ ವ್ಯವಸ್ಥೆ ಮತ್ತು ಚರಂಡಿ ವಿಸ್ತರಿಸುವುದು.

ಊ) ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಯು ಸ್ವಾಯತ್ತ ಸಂಸ್ಥೆಯಾಗಿ ರೂಪುಗೊಂಡಿರುವುದರಿಂದ ವಿಸರ್ಜಿಸುವುದು ಸೂಕ್ತವಲ್ಲ. ಆದರೆ ಸ್ಥಳೀಯ ಸಂಸ್ಥೆಗಳು ಕೊಳಚೆ ನಿರ್ಮೂಲನಾ ಮಂಡಳಿ ಅಭಿವೃದ್ಧಿಪಡಿಸಿದ ಕೊಳಚೆ ಪ್ರದೇಶಗಳ ನಿರ್ವಹಣೆಯನ್ನು ಮಾಡಬೇಕಾಗಿರುತ್ತದೆ.

ಕೃಷಿ ವಿಶ್ವವಿದ್ಯಾಲಯಗಳ ವಿವಿಧ ಕಾರ್ಯಕ್ರಮಗಳು.

127 (551) ಶ್ರೀ ಬೆಲ್ಲದ ಚಂದ್ರಕಾಂತ ಗುರಪ್ಪ (ಧಾರವಾಡ) :— ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) 1995-96, 96-97 ಮತ್ತು 97-98ನೇ ಸಾಲುಗಳಲ್ಲಿ ರಾಜ್ಯದ ಎರಡು ಕೃಷಿ ವಿಶ್ವವಿದ್ಯಾಲಯಗಳ ವಿವಿಧ ಕಾರ್ಯಕ್ರಮಗಳಿಗೆ ಒದಗಿಸಿದ ಹಣ ಎಷ್ಟು; (ವಿಶ್ವವಿದ್ಯಾಲಯವಾರು ವಿವರ ಒದಗಿಸುವುದು)